ಆ) ರಾಜ್ಯದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿದೆ ಹಾಗೂ ಮಹಾಲೇಖಪಾಲರು ಇತ್ತೀಚೆಗೆ ನೀಡಿರುವ ಹಣಕಾಸಿನ ವ್ಯವಹಾರದ ಲೆಕ್ಕ ಪತ್ರ ಮಾಸಿಕ ವರದಿಯ ಪ್ರಕಾರ ರಾಜ್ಯದ ಬೊಕ್ಕಸಕ್ಕೆ ಜೂನ್ 91ರ ತಿಂಗಳ ಅಂತ್ಯದವರೆಗೆ ಶೇಖರಣೆಯಾದ ರಾಜಸ್ವ ಹಣ 912.28 ಕೋಟಿ ರೂಗಳು.

ಇ) ಸರ್ಕಾರವು ಯೋಜಿಸಿದ ಹಾಗೂ ಆಯ ವ್ಯಯದಲ್ಲಿ ತೋರಿಸಿದ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಬೇಕಾಗುವ ಸಂಪನ್ಮೂಲವನ್ನು ಕ್ರೂಢೀಕರಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ

2116 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 50ಕೋಟಿ ಹಣವನ್ನು ಹಿಂದಿನ ವರ್ಷ ನೀಡಿದ್ದು ನಿಜವೇ?

2. ಕಳೆದ 2 ವರ್ಷದ ಅವಧಿಯಲ್ಲಿ ಈ 50 ಕೋಟಿಯಲ್ಲಿ ಖರ್ಚಾದ ಹಣವೆಷ್ಟು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು) :

1) ಹೌದು.

2) 1990-91ರಲ್ಲಿ ಹಣವನ್ನು ಪೂರ್ಣವಾಗಿ ಉಪಯೋಗಿಸಲಾಗಿದೆ. 1991-92ನೇ ಸಾಲಿನಲ್ಲಿ ಅಯವ್ಯಯದಲ್ಲಿ ಉದ್ದೇಶಿಸಲಾಗಿರುವ 50 ಕೋಟಿ ರೂಗಳಲ್ಲಿ ಒಟ್ಟು 10-97 ಕೋಟಿ ರೂಗಳನ್ನು ಮೊದಲು 4 ತಿಂಗಳಲ್ಲಿ ವೆಚ್ಚಮಾಡಲಾಗಿದೆ.

ಸರ್ಕಾರಿ ಮನೆಗಳ ಬಗ್ಗೆ

2092-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯ ಮಂತ್ರಿಗಳು, ಮಂತ್ರಿಗಳು ಹಾಗೂ ರಾಜ್ಯ ಮಂತ್ರಿಗಳು ಯಾರ್ಯಾರು ಸರ್ಕಾರಿ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಆ) ಅವರುಗಳಿಗೆ ಒದಗಿಸಲಾಗಿರುವ ಪೀಠೋಪಕರಣಗಳಿಗೆ ತಗುಲಿರುವ ಒಟ್ಟು ವೆಚ್ಚ ಎಷ್ಟು? (ಎಲ್ಲಾ ಮಂತ್ರಿಗಳ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಮತ್ತು ಆ) ಅನುಬಂಧದಲ್ಲಿ ವಿವರಿಸಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಸಚಿವರ ಹೆಸರು	ಸರ್ಕಾರಿ ನಿವಾಸ ಸಂಖ್ಯೆ	ಪೀಠೋಪಕರಣ ಗಳಿಗಾಗಿ ಮಾಡಿರುವ ವೆಚ್ಚ ರೂ. ಗಳು
01.	ಶ್ರೀ ಎಸ್. ಬಂಗಾರಪ್ಪ, ಮುಖ್ಯಮಂತ್ರಿಗಳು.	ಕೆ.ಕೆ. ಅನೆಕ್ಸ್, ನಂ:1, (ಕಾವೇರಿ)	4,63,415-00
02.	ಶ್ರೀ ಧರಮ್ ಸಿಂಗ್, ಗೃಹ ಸಚಿವರು	ಕೆ.ಕೆ. ಸೌತ್. ನಂ:1, 3 ಸಚಿವರ ನಿವಾಸಗಳು	3,67,321-00
03.	ಶ್ರೀ ಜಿ. ಪುಟ್ಟಸ್ವಾಮಿಗೌಡ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	ಕೆ.ಕೆ. ಸೌತ್, ನಂ:2, 3 ಸಚಿವರ ನಿವಾಸಗಳು	3,95,136-00
04.	ಶ್ರೀ ಬಿ. ಬಸವಲಿಂಗಪ್ಪ, ವಿಜ್ಞಾನ ಮತ್ತು ಯಂತ್ರಕಲಾ ಸಚಿವರು	ಕೆ.ಕೆ. ಸೌತ್, ನಂ:3, 3 ಸಚಿವರು ನಿವಾಸಗಳು	3,58,010-00
05.	ಶ್ರೀ ಕೆ.ಜೆ. ಜಾರ್ಜ್, ವಸತಿ ಮತ್ತು ನಗರಾಭಿವೃದ್ಧಿ ಸಚಿವರು.	ನಂ:5, ಸಪ್ತ ಸಚಿವರ ನಿವಾಸಗಳು, ಸ್ಯಾಂಕಿ ರಸ್ತೆ.	3,60,820-00
06.	ಶ್ರೀ ಅಜೀಜ್ ಸೇಠ್, ಸಾರಿಗೆ ಸಚಿವರು	ನಂ:6, ಸಪ್ತ ಸಚಿವರ ನಿವಾಸಗಳು, ಸ್ಯಾಂಕಿ ರಸ್ತೆ.	2,90,473-00
07.	ಶ್ರೀ ಟಿ.ಎನ್. ನರಸಿಂಹಮೂರ್ತಿ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು	ನಂ:7, ಸಪ್ತ ಸಚಿವರ ನಿವಾಸಗಳು, ಸ್ಯಾಂಕಿ ರಸ್ತೆ.	2,84,638-00
08.	ಶ್ರೀಮತಿ ಮನೋರಮಾ ಮಧ್ವರಾಜ್, ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು.	ಗೃಹ ಮಂಡಳಿ ನಿವಾಸ ನಂ:2, ಕ್ರೆಸೆಂಟ್ ರಸ್ತೆ.	3,42,044-00
09	ಶ್ರೀ ಎಸ್. ರಮೇಶ್, ಯುವಜನ ಸೇವಾ ರಾಜ್ಯ ಸಚಿವರು	ಕ್ರೆಸೆಂಟ್ ಹೌಸ್, ಕ್ರೆಸೆಂಟ್ ರಸ್ತೆ.	3,98,957-00
10	ಶ್ರೀ ಎಸ್. ಬಂಗಾರಪ್ಪ, ಮುಖ್ಯಮಂತ್ರಿಗಳು	ರೇಸ್‌ವ್ಯೂ ಬಿಲ್ಡಿಂಗ್ ರೇಸ್ ಕೋರ್ಸ್ ರಸ್ತೆ.	4.04,222-00 (ಈ ನಿವಾಸದಲ್ಲಿ ಮುಖ್ಯ ಮಂತ್ರಿಗಳು ದಿನಾಂಕ : 25 - 2 - 91 ರವರೆಗೆ ವಾಸ ಮಾಡುತ್ತಿದ್ದಾಗ ಪೀಠೋಪಕರಣಗಳನ್ನು ಒದಗಿಸಲಾಗಿತ್ತು)

11	ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ, ಕಂದಾಯ ಸಚಿವರು	-ಅದೇ-	1,27,768-00
12	ಶ್ರೀ ಬಿ. ಶಿವಮೂರ್ತಿ, ವಾರ್ತಾ ಮತ್ತು ಪ್ರಸಾರ ರಾಜ್ಯ ಮಂತ್ರಿಗಳು	ನಂ:ಎ-1 , ಜಯಮಹಲ್ ಬಡಾವಣೆ	3,12,864-00
13	ಶ್ರೀ ಬಿ. ಶಿವಣ್ಣ, ಸಮಾಜ ಕಲ್ಯಾಣ ಸಚಿವರು	ರೇಸ್‌ವ್ಯೂ ಕಾಟೇಜ್, ರೇಸ್ ಕೋರ್ಸ್ ರಸ್ತೆ.	3,72,704-00
14	ಶ್ರೀ ಎ.ಎಸ್. ನಾಡಗೌಡ, ಕಾರ್ಮಿಕ ರಾಜ್ಯ ಸಚಿವರು	ನಂ: ಬಿ-5, ಜಯಮಹಲ್ ಬಡಾವಣೆ	1,83,850-00
15	ಶ್ರೀ ಎಂ.ಎಸ್. ಆತ್ಮಾನಂದ, ತೋಟಗಾರಿಕೆ ರಾಜ್ಯ ಸಚಿವರು	ನಂ: ಬಿ-6, ಜಯಮಹಲ್ ಬಾಡವಣೆ	3,60,640-00
16	ಶ್ರೀ ನಜೀರ್ ಅಹಮದ್, ಸಣ್ಣ ಕೈಗಾರಿಕೆ ರಾಜ್ಯ ಸಚಿವರು.	ಗೃಹ ಮಂಡಳಿ ನಿವಾಸ, ನಂ : 275, ಸದಾಶಿವ ನಗರ, ಬೆಂಗಳೂರು.	2,08,396-00
17	ಶ್ರೀ ಎಂ. ವೀರಪ್ಪ ಮೊಯಿಲಿ, ಶಿಕ್ಷಣ ಸಚಿವರು.	ನಂ:1, ರವೀಂದ್ರನಾಥ ಠಾಗೂರ್ ನಗರ.	2,88,485-00 (ಈ ನಿವಾಸವನ್ನು ಸರ್ಕಾರದ ಅಧಿಕೃತ ನಿವಾಸವೆಂದು ಪರಿಗಣಿಸಿದ್ದಾಗ ಪೀಠೋಪಕರಣಕ್ಕಾಗಿ ವೆಚ್ಚ ಮಾಡಲಾಗಿದೆ)
18	ಶ್ರೀ ಇ.ಟಿ. ಶಂಬುನಾಥ, (ಅರಣ್ಯ ರಾಜ್ಯ ಸಚಿವರು)	ನಂ. : 317, ಸದಾಶಿವನಗರ, ಬೆಂಗಳೂರು.	1,35,599-00
19	ಶ್ರೀ ಮಲ್ಲಿಕಾರ್ಜುನ ಪ್ರಸನ್ನ, ಸಣ್ಣ ನೀರಾವರಿ ರಾಜ್ಯ ಸಚಿವರು	ನಂ: 368, ರವೀಂದ್ರನಾಥ್ ಠಾಗೂರ್ ನಗರ, ಬೆಂಗಳೂರು.	2,27,888-00
20	ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.	ನಂ : ಎ - 2, ಜಯಮಹಲ್ ಬಡಾವಣೆ, ಬೆಂಗಳೂರು.	3,57,305-00 (ಈ ವೆಚ್ಚವನ್ನು ಮುಖ್ಯ ಸಚೇತಕರಾಗಿದ್ದಾಗ ಮಾಡಿದ್ದಾಗಿರುತ್ತದೆ)
		ಒಟ್ಟು :	ರೂ. 62,40,537-00